# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1144 |
| ಸದಸ್ಯರ ಹೆಸರು: | : | ಡಾ|| ಎಂ. ಜಿ. ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು: | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ: | : | 13/03/2026 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;</td><td>ಬೀದರ ಜಿಲ್ಲೆಯಲ್ಲಿ ಪ್ರಸ್ತುತ 2051 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಯೋಜನಾವಾರು ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ. ಸಂ</th><th>ಶಿಶು ಅಭಿವೃದ್ಧಿ ಯೋಜನೆಯ ಹೆಸರು</th><th>ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ</th></tr>
<tr><td>01</td><td>ಬೀದರ</td><td>507</td></tr>
<tr><td>02</td><td>ಭಾಲ್ಕಿ</td><td>360</td></tr>
<tr><td>03</td><td>ಬಸವಕಲ್ಯಾಣ</td><td>433</td></tr>
<tr><td>04</td><td>ಹುಮನಾಬಾದ</td><td>361</td></tr>
<tr><td>05</td><td>ಸಂತಪೂರ (ಔ)</td><td>390</td></tr>
<tr><td colspan="2">ಒಟ್ಟು</td><td>2051</td></tr>
</table>
</td></tr>
<tr><td>ಆ)</td><td>ಕಳೆದ ಎರಡು ವರ್ಷಗಳಲ್ಲಿ ಪೂರಕ ಪೌಷ್ಟಿಕಾಹಾರ ಯೋಜನೆ (ಎಸ್ಎನ್‌ಪಿ) ಅಡಿಯಲ್ಲಿ ಜಿಲ್ಲೆಗೆ ಬಿಡುಗಡೆಯಾದ ಅನುದಾನವೆಷ್ಟು ಮತ್ತು ಅದರಲ್ಲಿ ವೆಚ್ಚವಾದ ಮೊತ್ತವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಎರಡು ವರ್ಷಗಳಲ್ಲಿ ಬೀದರ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ ತಾಲ್ಲೂಕವಾರು ಬಿಡುಗಡೆಯಾದ ಅನುದಾನ ಹಾಗೂ ವೆಚ್ಚವಾದ ಮೊತ್ತದ ವಿವರ ಈ ಕೆಳಗಿನಂತಿದೆ.<br><br>(ಲಕ್ಷಗಳಲ್ಲಿ)
<table>
<tr><th rowspan="2">ಕ್ರ. ಸಂ</th><th rowspan="2">ತಾಲ್ಲೂಕಿನ ಹೆಸರು</th><th colspan="2">2023-24</th><th colspan="2">2024-25</th></tr>
<tr><th>ಬಿಡುಗಡೆ</th><th>ಖರ್ಚು</th><th>ಬಿಡುಗಡೆ</th><th>ಖರ್ಚು</th></tr>
<tr><td>1</td><td>ಬೀದರ್</td><td>287.35</td><td>286.27</td><td>1058.22</td><td>924.02</td></tr>
<tr><td>2</td><td>ಔರದ್</td><td>776.43</td><td>766.86</td><td>966.67</td><td>924.67</td></tr>
<tr><td>3</td><td>ಬಸವಕಲ್ಯಾಣ</td><td>720.29</td><td>713.88</td><td>808.85</td><td>778.93</td></tr>
<tr><td>4</td><td>ಭಾಲ್ಕಿ</td><td>408.92</td><td>400.64</td><td>905.88</td><td>824.62</td></tr>
<tr><td>5</td><td>ಹುಮ್ನಾಬಾದ್</td><td>543.59</td><td>351.69</td><td>1106.43</td><td>1001.89</td></tr>
<tr><td colspan="2">ಒಟ್ಟು</td><td>2736.58</td><td>2519.34</td><td>4846.05</td><td>4454.13</td></tr>
</table>
</td></tr>
<tr><td>ಇ)</td><td>ಜಿಲ್ಲೆಯಲ್ಲಿ ತೀವ್ರ ಅಪೌಷ್ಟಿಕತೆ (ಎಸ್ಎಎಂ) ಮತ್ತು ಸಾಧಾರಣ ಅಪೌಷ್ಟಿಕತೆ (ಎಂಎಎಂ) ಹೊಂದಿರುವ ಮಕ್ಕಳನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ ಜಿಲ್ಲೆಯಲ್ಲಿ ಅಪೌಷ್ಟಿಕತೆ ಪ್ರಮಾಣ ಇಳಿಕೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ; (ವರ್ಷವಾರು ಅಂಕಿ-ಅಂಶಗಳನ್ನು ಒದಗಿಸುವುದು)</td><td>ಕಳೆದ 03 ವರ್ಷಗಳಲ್ಲಿ ಬೀದರ ಜಿಲ್ಲೆಯ ತೀವ್ರ ಅಪೌಷ್ಠಿಕ ಮಕ್ಕಳ ಹಾಗೂ ಸಾಧಾರಣ ಅಪೌಷ್ಠಿಕ ಮಕ್ಕಳ ಸಂಖ್ಯೆಯು ಗಣನೀಯವಾಗಿ ಇಳಿಕೆಯಾಗಿದ್ದು ವಿವರ ಕೆಳಕಂಡಂತಿದೆ.
<table>
<tr><th rowspan="2">ಕ್ರ. ಸಂ</th><th rowspan="2">ತಾಲ್ಲೂಕಿನ ಹೆಸರು</th><th colspan="2">2022-23</th><th colspan="2">2023-24</th><th colspan="2">2024-25</th></tr>
<tr><th>SAM ಮಕ್ಕಳ ಸಂಖ್ಯೆ</th><th>MAM ಮಕ್ಕಳ ಸಂಖ್ಯೆ</th><th>SAM ಮಕ್ಕಳ ಸಂಖ್ಯೆ</th><th>MAM ಮಕ್ಕಳ ಸಂಖ್ಯೆ</th><th>SAM ಮಕ್ಕಳ ಸಂಖ್ಯೆ</th><th>MAM ಮಕ್ಕಳ ಸಂಖ್ಯೆ</th></tr>
<tr><td>01</td><td>ಬೀದರ್</td><td>24</td><td>11116</td><td>45</td><td>4021</td><td>32</td><td>1717</td></tr>
<tr><td>02</td><td>ಔರದ್</td><td>19</td><td>3118</td><td>19</td><td>2773</td><td>25</td><td>2432</td></tr>
<tr><td>03</td><td>ಬಸವ ಕಲ್ಯಾಣ</td><td>31</td><td>3212</td><td>34</td><td>3462</td><td>30</td><td>2188</td></tr>
<tr><td>04</td><td>ಭಾಲ್ಕಿ</td><td>21</td><td>7639</td><td>36</td><td>6269</td><td>17</td><td>7351</td></tr>
<tr><td>05</td><td>ಹುಮ್ನಾ ಬಾದ್</td><td>47</td><td>6284</td><td>31</td><td>2652</td><td>17</td><td>2388</td></tr>
<tr><td colspan="2">ಒಟ್ಟು</td><td>142</td><td>31369</td><td>165</td><td>19177</td><td>121</td><td>16076</td></tr>
</table>
</td></tr>
</table>

| | | |
|---|---|---|
| ಈ) | ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾಗುತ್ತಿರುವ ಮೊಟ್ಟೆ, ಹಾಲಿನ ಪುಡಿ ಮತ್ತು ಬಾಲಸುಧೆ ಆಹಾರ ಪದಾರ್ಥಗಳು ಸಕಾಲಕ್ಕೆ ತಲುಪುತ್ತಿಲ್ಲ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಳೆದ ಒಂದು ವರ್ಷದಲ್ಲಿ ಎಷ್ಟು ಬಾರಿ ಪೂರೈಕೆಯಲ್ಲಿ ವಿಳಂಬ ಉಂಟಾಗಿದೆ ಮತ್ತು ಇದಕ್ಕೆ ಕಾರಣರಾದವರ ಮೇಲೆ ಕೈಗೊಂಡ ಕ್ರಮವೇನು; | ಕಳೆದ ಒಂದು ವರ್ಷದಲ್ಲಿ ಬೀದರ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ, ಕೋಳಿ ಮೊಟ್ಟೆ, ಹಾಲಿನ ಪುಡಿ ಸರಬರಾಜಿನಲ್ಲಿ ವಿಳಂಬವಾಗಿರುವ ಬಗ್ಗೆ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ. |
| ಉ) | ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ನೀಡಲಾಗುವ ಪೌಷ್ಟಿಕ ಆಹಾರದ ಗುಣಮಟ್ಟವನ್ನು ಪರಿಶೀಲಿಸಲು ಇರುವ ವ್ಯವಸ್ಥೆ ಯಾವುದು; ಜಿಲ್ಲೆಯಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳು ಕಳೆದ ಒಂದು ವರ್ಷದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಆಹಾರದ ಮಾದರಿಗಳನ್ನು ಪರೀಕ್ಷಿಸಿದ್ದಾರೆ; (ಪರೀಕ್ಷಾ ವರದಿಯ ವಿವರ ನೀಡುವುದು) | ಬೀದರ ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ನೀಡುವ ಮುಂಚಿತವಾಗಿಯೆ NABL ಸಂಸ್ಥೆಯಿಂದ ನೋಂದಾಯಿತ ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೆ ಒಳಪಡಿಸಿ, ಉತ್ತಮ ಫಲಿತಾಂಶ ಬಂದ ನಂತರವೆ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಸರಬರಾಜು ಮಾಡಲಾಗುತ್ತಿದೆ.<br><br>ಬೀದರ್ ಜಿಲ್ಲೆಯಲ್ಲಿ ಆಹಾರ ಸುರಕ್ಷಿತ ಅಧಿಕಾರಿಗಳು ಕಳೆದ 01 ವರ್ಷದಲ್ಲಿ 96 ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿದ್ದು, ಸದರಿ ಅಂಗನವಾಡಿ ಕೇಂದ್ರಗಳ ಪೈಕಿ 59 ಅಂಗನವಾಡಿ ಕೇಂದ್ರಗಳ ಆಹಾರ ಮಾದರಿಗಳನ್ನು ಸಂಗ್ರಹಿಸಲಾಗಿರುತ್ತದೆ. ಸದರಿ ಮಾದರಿಗಳಲ್ಲಿ ಇದುವರೆಗೂ ಯಾವುದೇ ವ್ಯತಿರಿಕ್ತ ವರದಿ ಸ್ವೀಕೃತವಾಗಿರುವುದಿಲ್ಲ. |
| ಊ) | ಜಿಲ್ಲೆಯ ಅನೇಕ ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳಿಲ್ಲದೆ ಬಾಡಿಗೆ ಕಟ್ಟಡ ಅಥವಾ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಲ್ಲಿ ನಡೆಯುತ್ತಿರುವುದು ಪೌಷ್ಟಿಕ ಆಹಾರದ ದಾಸ್ತಾನು ಮೇಲೆ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೊಸ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ರೂಪಿಸಿರುವ ಯೋಜನೆಯೇನು? | ಜಿಲ್ಲೆಯ ಶಿಥಿಲಾವಸ್ಥೆಯ ಕಟ್ಟಡಗಳಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ಸಮೀಪದಲ್ಲಿರುವ ಶಾಲೆ, ಪಂಚಾಯತಿ ಕಟ್ಟಡ, ಸಮುದಾಯ ಭವನಗಳಲ್ಲಿ ಸ್ಥಳಾಂತರಿಸಿ, ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಆದ್ದರಿಂದ ಪೌಷ್ಟಿಕ ಆಹಾರದ ದಾಸ್ತಾನು ಮೇಲೆ ಈವರೆವಿಗೂ ಯಾವುದೇ ಅನಾನುಕೂಲತೆ ಉಂಟಾಗಿರುವುದಿಲ್ಲ.<br><br>ಮುಂದುವರೆದು, ಶಿಥಿಲಾವಸ್ಥೆಯಲ್ಲಿರುವ ಅಂಗನವಾಡಿ ಕಟ್ಟಡಗಳ ಮರುನಿರ್ಮಾಣ ಮತ್ತು ಹೊಸ ಅಂಗನವಾಡಿ ಕಟ್ಟಡ ನಿರ್ಮಾಣಕ್ಕಾಗಿ ಅನುದಾನದ ಲಭ್ಯತೆ ಆಧಾರದ ಮೇಲೆ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. |

**ಸಂಖ್ಯೆ: ಮಮಇ 75 ಐಸಿಡಿ 2026**

(ಸಹಿ)

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.